ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ
BENGALURU CENTRAL UNIVERSITY
Central College Campus, Dr.AmbedkarVeedhi, Bengaluru,
E-mail ID: registrarevlubcu@gmail.com, Ph.No: 22295559

BCU/EX/PGEXAMS/C.Superintendent/2019-20/428 ದಿನಾಂಕ: 05.02.2020

ಗೆ,
ಡಾ. ಜ್ಯೋತಿ ವೆಂಕಟೇಶ್
ಸಹಾಯಕ ಪ್ರಾಧ್ಯಾಪಕರು
ವಿದೇಶಿ ಭಾಷಾ ಕೇಂದ್ರ
ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ
ಸೆಂಟ್ರಲ್ ಕಾಲೇಜು, ಬೆಂಗಳೂರು-560001.

ಮಾನ್ಯರೆ,

**ವಿಷಯ: ಫೆಬ್ರವರಿ 6, 2020 ರಿಂದ ಪ್ರಾರಂಭವಾಗುವ ಕಲಾ ವಿಭಾಗಗಳ ಪ್ರಥಮ ಸೆಮಿಸ್ಟರ್ ಸ್ನಾತಕೋತ್ತರ ಪರೀಕ್ಷೆಗಳ ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರಾಗಿ ನೇಮಿಸಿರುವ ಬಗ್ಗೆ.**

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ 04.02.2020

*****

ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೋರ್ಸುಗಳ ಪ್ರಥಮ ಸೆಮಿಸ್ಟರ್ ಪರೀಕ್ಷೆಗಳು ದಿನಾಂಕ 06-02-2020 ರಿಂದ ಪ್ರಾರಂಭವಾಗಲಿದ್ದು, ಪರೀಕ್ಷಾ ಕೇಂದ್ರಗಳ ಮುಖ್ಯ ಅಧೀಕ್ಷಕರುಗಳನ್ನಾಗಿ ಆಯಾ ಸ್ನಾತಕೋತ್ತರ ವಿಭಾಗಗಳ ಮುಖ್ಯಸ್ಥರುಗಳನ್ನು ಹಾಗೂ ಆಯಾ ಕಾಲೇಜುಗಳ ಪ್ರಾಂಶುಪಾಲರುಗಳನ್ನು ನೇಮಿಸಲಾಗಿದೆ. ಅದರಂತೆ, ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದಲ್ಲಿರುವ ಕಲಾವಿಭಾಗಗಳ ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರನ್ನಾಗಿ (Chief Superintendent) ತಮ್ಮನ್ನು ನೇಮಿಸಲಾಗಿದೆ. ಸೆಂಟ್ರಲ್ ಕಾಲೇಜಿನ ಹಳೆ ಫಿಜಿಕ್ಸ್ ಬ್ಲಾಕ್‌ನ್ನು ಕಲಾವಿಭಾಗಗಳಿಗೆ ಪರೀಕ್ಷಾ ಕೇಂದ್ರವೆಂದು ಘೋಷಿಸಲಾಗಿದ್ದು, ತಾವು ಸ್ನಾತಕೋತ್ತರ ಕಲಾವಿಭಾಗಗಳ ಪರೀಕ್ಷೆಗಳನ್ನು ಸುಸೂತ್ರವಾಗಿ ನಡೆಸಲು ಸೂಕ್ತ ಕ್ರಮತೆಗೆದುಕೊಳ್ಳಬೇಕೆಂದು ತಿಳಿಸಲಾಗಿದೆ.

ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ವಿದೇಶಿ ಭಾಷಾ ಕೇಂದ್ರವನ್ನು ಸ್ನಾತಕೋತ್ತರ ಕಲಾ ವಿಭಾಗದ ಪರೀಕ್ಷಾ ಕೇಂದ್ರಕ್ಕೆ ಟ್ಯಾಗ್‌ಮಾಡಿರುವುದರಿಂದ, ಸದರಿ ವಿಭಾಗಗಳ ಸಿಬ್ಬಂಧಿಗಳ ಸೇವೆಯನ್ನು ಉಪಯೋಗಿಸಿಕೊಂಡು ಪರೀಕ್ಷೆ ನಡೆಸಲು ಸಿದ್ಧತೆ ಮಾಡಿಕೊಳ್ಳಬೇಕೆಂದು ಕೋರುತ್ತೇನೆ.

ಅಗತ್ಯವಾದ ಉತ್ತರ ಪತ್ರಿಕೆ, ಕ್ಲಾಥ್ ಬ್ಯಾಗುಗಳು ಪರೀಕ್ಷಾ ವಿಭಾಗದಲ್ಲಿ ಲಭ್ಯವಿದ್ದು ಕುಲಸಚಿವರು(ಮೌ) ರವರ ಕಛೇರಿಯಲ್ಲಿ ಪಡೆಯಬಹುದಾಗಿದೆ. ಪ್ರಶ್ನೆ ಪತ್ರಿಕೆಯ ಪ್ಯಾಕೆಟನ್ನು ಪರೀಕ್ಷೆಯಿರುವ ದಿನದಂದು ನೀಡಲಾಗುವುದು. ಉತ್ತರ ಪತ್ರಿಕೆಗಳನ್ನು ಹಾಗೂ ಪ್ರಶ್ನೆಪತ್ರಿಕೆಯನ್ನು ತಾವು ಖುದ್ದಾಗಿ ಪತ್ರ ನೀಡಿ ಪಡೆಯಬಹುದಾಗಿದೆ ಅಥವಾ ನಿಮ್ಮ ಸಿಬ್ಬಂದಿಗೆ Authorisation ನೀಡಿ ಪಡೆಯಬಹುದಾಗಿದೆ.

ತಮ್ಮ ವಿಶ್ವಾಸಿ,

ಕುಲಸಚಿವರು(ಮೌಲ್ಯಮಾಪನ)

**ಪ್ರತಿ:**

1. ಎಲ್ಲಾ ಸ್ನಾತಕೋತ್ತರ ಕಲಾ ವಿಭಾಗಗಳ ಸಂಯೋಜನಾಧಿಕಾರಿಗಳು, ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ, ಸೆಂಟ್ರಲ್ ಕಾಲೇಜು, ಬೆಂಗಳೂರು- ಪರೀಕ್ಷೆ ಸುಸೂತ್ರವಾಗಿ ನಡೆಸಲು ಡಾ. ಜ್ಯೋತಿ ವೆಂಕಟೇಶ್ ಅವರಿಗೆ ಸಹಕರಿಸಲು ಕೋರಿದೆ.
2. ಕುಲಪತಿ/ಕುಲಸಚಿವ/ಕುಲಸಚಿವ(ಮೌಲ್ಯಮಾಪನ)/ಅವರ ವಿಶೇಷಾಧಿಕಾರಿಗಳು.
3. ಹಣಕಾಸು ಸಲಹೆಗಾರರು, ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ, ಬೆಂಗಳೂರು.